# ಎಂ.ಎಸ್. ಶ್ರೀರಾಮ್



ಕತೆಗಾರ, ಪ್ರಬಂಧಕಾರ, ಅರ್ಥತಜ್ಞ ಶ್ರೀರಾಮ್ ಬೆಂಗಳೂರಿನವರು. ಆದರೆ ಅವರು ಕರ್ನಾಟಕದಿಂದ ಹೊರಗಿದ್ದುದೇ ಹೆಚ್ಚು. ಉದ್ಯೋಗ ನಿಮಿತ್ತ ಹೈದರಾಬಾದ್, ಗುಜರಾತ್, ಅಹಮ್ಮದಾಬಾದ್‌ಗಳಿಗೆ ತಿರುಗಾಡಿ ಬಂದಿದ್ದಾರೆ. ದೇಶದ ಹಲವು ಭಾಗಗಳ ಹಳ್ಳಿಗಳಿಗೂ ಸುತ್ತಿದ್ದಾರೆ. ಅಲ್ಲದೆ, ರೋಮ್, ಬ್ರಸೆಲ್ಸ್ ಸೇರಿದಂತೆ ವಿದೇಶಗಳಿಗೂ ಭೇಟಿ ನೀಡಿ ಬಂದಿದ್ದಾರೆ. ಈ ಪ್ರವಾಸಗಳು, ತಿರುಗಾಟಗಳು ಅವರ ಬದುಕು–ಬರಹಕ್ಕೆ ಅನನ್ಯ ವಿಸ್ತಾರವನ್ನು ತಂದುಕೊಟ್ಟಿವೆ ಎಂದು ಹೇಳಬಹುದು. ಕತೆ ಮತ್ತು ಪ್ರಬಂಧಗಳನ್ನು ಅವರು ಕಳೆದ ಮೂರು ದಶಕಗಳಿಂದ ಬರೆಯುತ್ತ ಬಂದಿದ್ದಾರೆ. ನಗರದಲ್ಲಿಯೇ ಹುಟ್ಟಿ–ಬೆಳೆದ ಶ್ರೀರಾಮ್, ಆಧುನಿಕ ನಗರ ಜೀವನದ ಒಳ–ಹೊರಗನ್ನು ತಮ್ಮ ಕತೆಗಳಲ್ಲಿ ಕಟ್ಟಿ ಕೊಟ್ಟಿದ್ದಾರೆ. ಅವರು ಬರೆದಿದ್ದೇ ಕಡಿಮೆ. ಆದರೆ ವೈಚಾರಿಕ ಕಥನ ಶೈಲಿಯಿಂದ ಅವರ ಕತೆಗಳು ಗಮನ ಸೆಳೆಯುತ್ತವೆ. 'ಮಾಯಾದರ್ಪಣ' ಅವರ ಮೊದಲ ಕಥಾಸಂಕಲನ. 'ಅವರವರ ಸತ್ಯ', 'ತೇಲ್ ಮಾಲಿಶ್', 'ಸಲ್ಮಾನ್ ಖಾನನ ಡಿಫಿಕಲ್ಟೀಸು' ಅವರ ನಂತರದ ಕಥಾಸಂಕಲನಗಳು. ಅವರು 'ಕಥನ ಕುತೂಹಲ' ಎನ್ನುವ ವಿಶಿಷ್ಟ ಪುಸ್ತಕವನ್ನು ಹೊರತಂದಿದ್ದಾರೆ.

ಕಥನ ತಂತ್ರಕ್ಕೆ ಒತ್ತು ಕೊಡುತ್ತೇನೆ. ಒಂದು ಕತೆಯನ್ನು ಹೇಗೆಲ್ಲಾ ಹೆಣೆಯಬಹುದು ಎನ್ನುವುದು ಓದುವಾಗಲೂ ಬರೆಯುವಾಗಲೂ ನನ್ನ ಪ್ರಜ್ಞೆಯಲ್ಲಿರುತ್ತದೆ.

ನಾನು ಪ್ರಜ್ಞಾಪೂರ್ವಕವಾಗಿ ಮಾಡುವ ಮತ್ತೊಂದು ಪ್ರಕ್ರಿಯೆಯಿದೆ. ಅದು –ನನ್ನದೇ ಕತೆಗಳ ನಡುವೆ ಇರುವ ಕೊಂಡಿಗಳು. ಒಂದು ಕತೆಯನ್ನು ಮತ್ತೊಂದರಲ್ಲಿ ವಿಸ್ತರಿಸುತ್ತೇನೆ. ಒಂದು ಕತೆಯ ಪಾತ್ರವನ್ನು ಮತ್ತೊಂದಕ್ಕೆ ಎಳೆದು ತರುತ್ತೇನೆ. ಹೀಗಾಗಿಯೇ ನನ್ನ ಕತೆಯ ಅಂತ್ಯಗಳು ಅಪೂರ್ಣ ಎನ್ನಿಸುವಹಾಗೆ ತೆರೆದಿರುತ್ತದೆ. ಅಲ್ಲಿಗೆ ಮತ್ತೊಂದು ಕತೆಯ ಕೊಂಡಿ ಹಾಕಲು ಸಾಧ್ಯವಾಗುವಂತೆ ಅದನ್ನು ಬಿಟ್ಟುಕೊಟ್ಟಿರುತ್ತೇನೆ. ಅಲ್ಲಿಂದ ಮತ್ತೊಂದು ಕತೆ. ನನ್ನ ಹಲವು ಪಾತ್ರಗಳು – ಮುಖ್ಯವಾಗಿ ಎಪ್ಪತ್ತು ವರ್ಷ ದಾಟಿರುವ ಭಾಸ್ಕರ ರಾಯರು ಅನೇಕ ಕತೆಗಳಲ್ಲಿ ಮತ್ತೆ ಮತ್ತೆ ಕಾಣುತ್ತಾರೆ. ಎಂದಾದರೂ ಒಂದಿಷ್ಟು ಬಿಡಿಕತೆಗಳನ್ನು ಬರೆದು ಅವೆಲ್ಲವನ್ನೂ ಒಟ್ಟಿಗೆ ಓದಿದಾಗ ಕಾದಂಬರಿಯಂತೆ ಕಾಣಬೇಕು ಎನ್ನುವ ಸುಪ್ತ ಆಶಯ ನನ್ನಲ್ಲಿದೆ. ಕಾದಂಬರಿಯನ್ನೂ ಬರೆಯಬೇಕೆಂಬ ಆಸೆಯೂ ಇದೆ. ಎಂದು ಈಡೇರುತ್ತದೋ ಗೊತ್ತಿಲ್ಲ.

ಹಾಗೆಯೇ ನನ್ನ ಕತೆಗಳ ಸಂದರ್ಭವನ್ನು ನಾನು ಹೈದರಾಬಾದ್ ತೆಲಂಗಾಣ ಪ್ರಾಂತದಲ್ಲಿಯೇ ಪ್ರಜ್ಞಾಪೂರ್ವಕವಾಗಿ ಇರಿಸುತ್ತೇನೆ. ಸ್ಥಳೀಯ ಜಾತಿ ಪಂಥ ರಾಜಕೀಯ